ಮುಂದಿನ ತಿಂಗಳು ಕೊಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕೂಡ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ.

(11 : 30 ಘಂಟೆ)

ಬಹುಶಃ ಸೆಪ್ಟೆಂಬರ್ ತಿಂಗಳೊಳಗೆ ನೀರು ಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ :– ತಾವು ಈಗ ಸೆಪ್ಟೆಂಬರ್ ತಿಂಗಳಲ್ಲಿ ನೀರು ಕೊಡುತ್ತೇವೆಂದು ಹೇಳಿದ್ದೀರಿ. ಇದು ನಿಜವಗಿಯೂ ಸಂತೋಷದ ವಿಚಾರ. ಇದರ ಜೊತೆಯಲ್ಲಿ ನಾನು ತಮಗೆ sugestion ಕೊಡುವುದೇನೆಂದರೆ, ಮೊದಲಿಗೆ ತಾವು ನೀರು ಕೊಟ್ಟು ಅದಾದಮೇಲೆ ತಮ್ಮ ಇಲಾಖಾಧಿಕಾರಿಗಳ ಮೂಲಕ ಚಿತ್ರದುರ್ಗ ನಗರದ ನಾಗರೀಕರನ್ನು ಕರೆದು ಸಭೆ ಕರೆದು ಮೀಟರ್ ಅಳವಡಿಸುವುದಕ್ಕೆ ಮನವೊಲಿಸುವ ಕೆಲಸವನ್ನು ತಮ್ಮ ಅಧಿಕಾರಿಗಳು ಮಾಡುವುದಕ್ಕೆ ತಾವು direction ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆಲಂಗೂರು ಶ್ರೀನಿವಾಸ್ :– ಇದನ್ನು ಪರಿಶೀಲನೆ ಮಾಡಿ ಖಂಡಿತವಾಗಿಯೂ ಕೂಡ ಸಾರ್ವಜನಿಕರೆಲ್ಲರೂ ಒಪ್ಪಿಗೆ ಕೊಟ್ಟಾಗ, ಇದು ಬಹಳ ಉತ್ತಮವಾದ ಸಲಹೆ. ಇದನ್ನು ಮಾಡತಕ್ಕಂಥದ್ದಕ್ಕೆ ನೀರು ಕೊಟ್ಟ ನಂತರ ತಮ್ಮೆಲ್ಲರ ಸಲಹೆ ಪಡೆದುಕೊಂಡು ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ :– ಮೊದಲು ನೀರು ಕೊಟ್ಟು ಅನಂತರ ಮಾಡಿ.

ಶ್ರೀ ಆಲಂಗೂರು ಶ್ರೀನಿವಾಸ್ :– ನೀರು ಕೊಟ್ಟ ನಂತರ ಮಾಡುತ್ತೇವೆ.

<u>ಸಿಂಧನೂರು ಪಟ್ಟಣದ ಕ್ರೀಡಾಂಗಣ :–</u>

93 (452) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) :– ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಪಟ್ಟಣಕ್ಕೆ ಮಂಜೂರಾಗಿರುವ ಕ್ರೀಡಾಂಗಣದ ಅಂದಾಜು ಮೊತ್ತವೆಷ್ಟು;

ಆ) ಇಲ್ಲಿಯವರೆಗೆ ಖರ್ಚಾದ ಮೊತ್ತವೆಷ್ಟು;

ಇ) ಈ ಕ್ರೀಡಾಂಗಣದ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು) :

ಅ) ರೂ. 44.45 ಲಕ್ಷಗಳು

ಆ) ರೂ. 10.00 ಲಕ್ಷಗಳು

ಇ) ಜನವರಿ 2008 ರ ಅಂತ್ಯಕ್ಕೆ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಬಾದರ್ಲಿ ಹಂಪನಗೌಡ :– ಮಾನ್ಯ ಅಧ್ಯಕ್ಷರೇ, ಸಿಂಧನೂರು ಪಟ್ಟಣದ ಕ್ರೀಡಾಂಗಣಕ್ಕೆ 44 ಲಕ್ಷ ಅಂದಾಜು ಪಟ್ಟಿಯೊಂದು ಕೊಟ್ಟಿದ್ದಾರೆ. 10 ಲಕ್ಷ ಖರ್ಚಾಗಿದೆ. 2008 ರಲ್ಲಿ ಈ ಕ್ರೀಡಾಂಗಣ ಮುಗಿಸುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. 2002–03 ರಲ್ಲಿ ಪ್ರಾರಂಭವಾಗಿರುವ ಕ್ರೀಡಾಂಗಣದ ಯೋಜನೆಯಾಗಿದ್ದು, ಇದಕ್ಕೆ 10 ಲಕ್ಷ ರೂ. ಖರ್ಚಾಗಿತ್ತು. ಈ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇವತ್ತಿಗೂ ಒಂದು ಬಿಡಿ ಕಾಸೂ ಖರ್ಚಾಗಿಲ್ಲ. ಇದನ್ನು ಯಾವಾಗ ಮುಗಿಸುತ್ತಾರೆಂಬ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕು ಮತ್ತು ಯಾವ ತರಹದ ಕ್ರೀಡಾಂಗಣ ಅಂದರೆ, 400, ಮೀಟರ್ ಟ್ರ್ಯಾಕ್ , 800 ಮೀಟರ್ ಟ್ರ್ಯಾಕ್ ಮಾಡುತ್ತಾರೋ, ಅದಕ್ಕೆ ಸ್ಥಳ ಸರಿಯಾಗಿ ಇದೆಯೋ, ಇಲ್ಲವೋ ಎಂಬ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಸಚಿವರಿಂದ ತಮ್ಮ ಮೂಲಕ ಬಯಸುತ್ತಿದ್ದೇನೆ.

ಶ್ರೀ ಹನುಮಂತಪ್ಪ ವೈ. ಆಲ್ಕೋಡ್ :– ಸಂಸದರ ನಿಧಿಯಿಂದ 10 ಲಕ್ಷ ರೂ.ಗಳನ್ನು Land and Army ಯವರು ಖರ್ಚು ಮಾಡಿದ್ದಾರೆ. ಅದಕ್ಕೆ ನಮ್ಮ ಇಲಾಖೆಯಿಂದ ದಿನಾಂಕ 6–01–2007 ಕ್ಕೆ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿದೆ. ಅದಕ್ಕಿಂತ ಮುಂಚೆ ಜಾಗ ತೆಗೆದುಕೊಂಡು Land Army ಯವರು Compound ಹಾಕಿದ್ದಾರೆ. ಅದಾದಮೇಲೆ, ನಾವು ಅಧಿಕಾರಕ್ಕೆ ಬಂದ ಮೇಲೆ 12 ನೇ ಹಣಕಾಸು ಯೋಜನೆಯಲ್ಲಿ ದಿನಾಂಕ 6–01–2007 ಕ್ಕೆ ಏನು ಆಡಳಿತಾತ್ಮಕ ಮಂಜೂರಾತಿಯನ್ನು 44.45 ಲಕ್ಷ ರೂ.ಗಳಿಗೆ ನೀಡಿದೆ, ಅದನ್ನು 2008 ರ ಜನವರಿ ತಿಂಗಳೊಳಗೆ ಮುಗಿಸುತ್ತೇವೆ. ಇದರಲ್ಲಿ 200 ಮೀಟರ್ ಟ್ರ್ಯಾಕ್ ಮಾಡುತ್ತೇವೆ, Volley Ball track ಮತ್ತು 200 meter ಓಟದ track, long jump track ಅನ್ನು 1.50 ಲಕ್ಷ ರೂ.ಗಳಲ್ಲಿ ಮಾಡುತ್ತೇವೆ. ಸಮತಟ್ಟು ಮಾಡುವುದಕ್ಕೆ

12.95 ಲಕ್ಷ ರೂ.ಗಳನ್ನು ಖರ್ಚು ಮಾಡುತ್ತೇವೆ. Pavilion ಗಾಗಿ 23 ಲಕ್ಷ ರೂ.ಗಳನ್ನು ಖರ್ಚು ಮಾಡುತ್ತೇವೆ. ಈಗೇನು compound ಹಾಕಲಾಗಿದೆ, ಆ compound ನ ಉಳಿದ portion ಗೆ ಹಾಕಬೇಕಾಗಿದೆ, ಅದಕ್ಕೆ 7 ಲಕ್ಷ ರೂ.ಗಳನ್ನು ಕೊಡುತ್ತೇವೆ. ಇದನ್ನು ಜನವರಿ 2008 ಕ್ಕೆ ಮುಗಿಸಿಕೊಡುತ್ತೇವೆ.

ಶ್ರೀ ಬಾದರ್ಲಿ ಹಂಪನಗೌಡ :– ಈಗೇನು ಜಾಗ select ಆಗಿದೆ ಅದು 200 meter track, ಗೂ ಆಗಲಾರದ ಪರಿಸ್ಥಿತಿ ಇದೆ. ಆ ಜಾಗ ತುಂಬಾ ಚಿಕ್ಕದು. ಅದರ ಪಕ್ಕದಲ್ಲಿ Government College ಜಾಗ ಇದೆ. ಅದನ್ನು ಈ ಜಾಗಕ್ಕೆ ಸ್ಥಳಾಂತರ ಮಾಡಿದರೆ, ಆ ಜಾಗದಲ್ಲಿ ಇನ್ನೂ 400, 800 ಮೀಟರ್ ಟ್ರ್ಯಾಕ್‌ಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದರ ಬಗ್ಗೆ ಇಲಾಖೆಯಲ್ಲಿ ಏನಾದರೂ ಚಿಂತನೆ ಇದೆಯೇ?

ಶ್ರೀ ಹನುಮಂತಪ್ಪ ವೈ. ಆಲ್ಕೋಡ್ :– ಈಗಾಗಲೇ ಆ ಕಂಪೌಂಡ್ ಹಾಕಲಾಗಿರುವುದಕ್ಕೆ 10 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೀರಿ. ಇಷ್ಟು ಹಣವನ್ನು ಖರ್ಚು ಮಾಡಿದ ಮೇಲೆ ಇನ್ನೊಂದು ಕಡೆಗೆ ಹೋಗುವುದು ಕಷ್ಟವಾಗುತ್ತದೆ ಎನ್ನುವುದು ಇದ್ದರೂ ಕೂಡ, ಆ ದಿಕ್ಕಿನಲ್ಲಿ ಮಾಡುವಂಥದ್ದು ಏನಾದರೂ ಬಂದರೆ ಅದರ ಸಾಧಕಬಾಧಕಗಳನ್ನು ನೋಡಿ ತಮ್ಮ ಜೊತೆ ಕುಳಿತು ಮಾತನಾಡಿ ಅನುಕೂಲವೇನಾದರೂ ಆಗುವುದಿದ್ದರೆ ಆ ಕೆಲಸ ಮಾಡೋಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 94 (979)

ಅಧ್ಯಕ್ಷರು :– ಈಗ ಮಂತ್ರಿಗಳಿಲ್ಲ. ತಮ್ಮ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 95 (888)

(ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ. ವಿಶ್ವನಾಥ್ ಗೈರುಹಾಜರಿದ್ದರು)

ಶ್ರೀ ಎ.ಎಸ್. ಬಸವರಾಜು :– ಮಾನ್ಯ ಅಧ್ಯಕ್ಷರೆ, ಅರಸೀಕೆರೆಯಲ್ಲಿ ಕ್ರೀಡಾಂಗಣ ನೆನೆಗುದಿಗೆ ಬಿದ್ದಿದೆ. ನಮ್ಮ ಸ್ನೇಹಿತರಾದ ಗುತ್ತಿಗೆದಾರರು ಸುಮಾರು ಆರೇಳು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವತ್ತಿನವರೆಗೂ ಹಣ ಬಿಡುಗಡೆಯಾಗಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳು ಇದಕ್ಕೆ ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.